ಸಿ. ಸಿ. ನಂ. **1598/2018**

ಪಿ ಡಬ್ಲ್ಯೂ: **1**

**ಸಾಕ್ಷಿಯು ದಿನಾಂಕಃ 12-09-2024 ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಮುಂದುವರೆದ ಪಾಟಿ ಸವಾಲುಃ ಆರೋಪಿ ಪರ ಶ್ರೀ ಇ ವಿ ಎ ಜಿ., ವಕೀಲರಿಂದ</u>**

ನಿಪಿಃ **8** ರ ಪಾಸ್ ಬುಕ್ ನನ್ನ ಖಾತೆಗೆ ಸಂಬಂಧಿಸಿದ್ದು ಅಂದರೆ ಸರಿ. **2016** ರಲ್ಲಿ ನನಗೆ ರೂ. **27,000/-** ಸಂಬಳ ಬಂದಿತ್ತು ಅಂದರೆ ಸರಿ. ಜೂನ್ **-2016** ರಲ್ಲಿ ರೂ. **27,000/-** ಸಂಬಳ ಬಂದಿತ್ತು ಅಂದರೆ ಸರಿ. ನಾನು ರೂ. **4,00,000/-** ಗಳನ್ನು ಆರೋಪಿಗೆ ನೀಡಲು ಬ್ಯಾಂಕ್ ನಿಂದ ಬಿಡಿಸಿದ್ದೆ ಎಂದು ದೂರಿನಲ್ಲಿ ಬರೆಸಿರುವುದಿಲ್ಲ. ನಾನು ಆದಾಯ ತೆರಿಗೆ ಪಾವತಿದಾರ ಇರುತ್ತೇನೆ. ಸದರಿ ಆದಾಯ ತೆರಿಗೆ ರಿಟರ್ನ ನಲ್ಲಿ ಆರೋಪಿಯಿಂದ ರೂ. **4,00,000/-** ಬರುವುದಿದೆ ಎಂದು ತೋರಿಸಿರುವುದಿಲ್ಲ. ನಾನು ಆದಾಯ ತೆರಿಗೆ ಪಾವತಿಸಿದ ಬಗ್ಗೆ ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ. ಆರೋಪಿ ಕೂಡಾ ಶಿಕ್ಷಕನಿದ್ದು, ನನ್ನ ಬಳಿ ಸಾಲ ಮಾಡುವ ಅವಶ್ಯಕತೆ ಅವರಿಗೆ ಇರಲಿಲ್ಲ ಅಂದರೆ ಸರಿಯಲ್ಲ.

ಈಗ ಆರೋಪಿಗೆ ಸಂಬಳ ಎಷ್ಟು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಅವರಿಗೆ ರೂ. **60,000/-** ರಿಂದ **70,000/-** ಮಾಸಿಕ ಸಂಬಳ ಬರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ಸಾಲ ಮಾಡುವ ಉದ್ದೇಶ ಇರಲಿಲ್ಲ ಅಂದರೆ ಸರಿಯಲ್ಲ. ನಾನು ನೀಡಿದ ನೋಟಿಸ್ ಗಳು ಆರೋಪಿಗೆ ತಲುಪಿಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ನಾನು ಅವರು ಇದ್ದ ವಿಳಾಸಕ್ಕೆ ನೋಟಿಸ್ ಕಳುಹಿಸಿರುತ್ತೇನೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.